# ಬಿ.ಎಸ್. ವೆಂಕಟಲಕ್ಷ್ಮಿ (1946–2009)

‘ಮಯೂರ’ದ ಅತ್ಯಂತ ಜನಪ್ರಿಯ ಅಂಕಣ ‘ಪತ್ನಿಯರು ಕಂಡಂತೆ ಪ್ರಸಿದ್ಧರು’. ಈ ಅಂಕಣ 1993–1995ರ ವರೆಗೆ ಪ್ರಕಟವಾಯಿತು. ಈ ಅಂಕಣದಲ್ಲಿನ ಸಂದರ್ಶನ ರೂಪದ ಈ ವ್ಯಕ್ತಿಚಿತ್ರಗಳನ್ನು ಪ್ರಸಿದ್ಧ ವ್ಯಕ್ತಿಗಳ ಪತ್ನಿಯರನ್ನು ಪತ್ರಕರ್ತೆ ಬಿ.ಎಸ್. ವೆಂಕಟಲಕ್ಷ್ಮಿ ಮಾತನಾಡಿಸಿ ಬರೆದರು. ಈ ಮಾಲಿಕೆಯಲ್ಲಿ ಕೆ.ಎಸ್. ನರಸಿಂಹಸ್ವಾಮಿ, ಇ.ಎ.ಎಸ್. ಪ್ರಸನ್ನ, ಹಾ.ಮಾ. ನಾಯಕ, ಬಂಗಾರಪ್ಪ, ಸು.ರಂ. ಎಕ್ಕುಂಡಿ, ಎಸ್.ಆರ್. ಪುಟ್ಟಣ್ಣ ಕಣಗಾಲ್, ವಿನಾಯಕ ತೊರವಿ ಸೇರಿದಂತೆ 40 ಪ್ರಸಿದ್ಧ ಸಾಧಕರ ಬಗ್ಗೆ ಅವರ ಪತ್ನಿಯರು ಕಂಡ ಸಮೀಪದ ಚಿತ್ರಣವಿತ್ತು.

ಈ ಅಂಕಣವನ್ನು ಬರೆದ ಬೆಳ್ಳೂರು ಸುಬ್ಬರಾಮಯ್ಯ ವೆಂಕಟಲಕ್ಷ್ಮಿ ಅವರು ಹುಟ್ಟಿದ್ದು ಬೆಂಗಳೂರಲ್ಲಿ. ಭಾರತೀಯ ವಿದ್ಯಾಭವನದಿಂದ ಪತ್ರಿಕೋದ್ಯಮ ಸ್ನಾತಕೋತ್ತರ ಪದವಿ ಪಡೆದು, 1971ರಿಂದ 1995ರ ವರೆಗೆ ಕರ್ನಾಟಕ ಸರಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿ ಸ್ವಯಂನಿವೃತ್ತಿ ಪಡೆದರು. ಕಾರ್ಖಾನೆಗಳ ಬೊಯ್ಲರ್ ಎಂಜಿನಿಯರ್ ಆಗಿದ್ದ ಎಚ್.ಎಸ್. ಶ್ಯಾಮರಾವ್ ಜತೆ 1975ರಲ್ಲಿ ವಿವಾಹವಾಗಿ ಅವರ ನೆರವಿನಿಂದ 2000ರಲ್ಲಿ ‘ಚರ್ಚೆಗೊಂದು ಚಾವಡಿ’ ಖಾಸಗಿ ಪತ್ರಿಕೆಯನ್ನು ಶುರುಮಾಡಿ 9 ವರ್ಷ ಕಾಲ ಸಂಪಾದಿಸಿ ಪ್ರಕಟಿಸಿದರು.



ಪತ್ರಿಕೆಗಳಲ್ಲಿ ಇವರ ವೈಚಾರಿಕ ಲೇಖನಗಳು, ಸಂದರ್ಶನಗಳು ಪ್ರಕಟವಾಗಿವೆ. ಸಂಗೀತ, ಚಿತ್ರಕಲೆ, ಲಲಿತ ಕಲೆಗಳಲ್ಲಿ ತೀವ್ರ ಆಸಕ್ತಿ ಹೊಂದಿದ್ದು, ಕಲಾವಿದರ ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ವೆಂಕಟಲಕ್ಷ್ಮಿ, ಹಲವು ಮಹಿಳಾ ಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ‘ಕನ್ನಡ ಲೇಖಕಿಯರ ನೆಲೆಬೆಲೆ’, ‘ಬದುಕು ಬವಣೆ ಭರವಸೆ’ (ಮಹಿಳಾ ಜಗತ್ತಿನ ಅನಾವರಣ), ‘ಸಂಗೀತ ಸಾಮ್ರಾಟ್ ಮಲ್ಲಿಕಾರ್ಜುನ ಮನ್ಸೂರ’, ‘ಚಿತ್ರಕಲಾವಿದ ಎಂ.ಬಿ. ಪಾಟೀಲ’, ‘ಶ್ರೀಮದ್ಭಾಗವತಂ’ (ಅನುವಾದ; ಇಂಗ್ಲಿಷ್ ಮೂಲ: ಕೆ.ಎಸ್. ಬೆಂಗೇರಿ), 117 ವ್ಯಕ್ತಿ ಚಿತ್ರಗಳಿರುವ ‘ಚರ್ಚೆಗೊಂದು ಚಾವಡಿ’ ವೆಂಕಟಲಕ್ಷ್ಮಿ ಅವರ ಪ್ರಕಟಿತ ಕೃತಿಗಳು. ‘ಪತ್ನಿಯರು ಕಂಡಂತೆ ಪ್ರಸಿದ್ಧರು’ ಅಂಕಣ ಪುಸ್ತಕ ರೂಪದಲ್ಲೂ ಪ್ರಕಟವಾಗಿದ್ದು, ಶಿವಮೊಗ್ಗದ ‘ಅಹರ್ನಿಶಿ’ ಪ್ರಕಾಶನ ಪ್ರಕಟಿಸಿದೆ.

ಗಮನಿಸುತ್ತಾ ಇದ್ದರು. ಹುಡುಗ ಮುಂದಕ್ಕೆ ಬರ್ತಾನೆ ಅನ್ನೋ ನಂಬಿಕೆ ಅವರಿಗೆ ಮೊದಲಿನಿಂದಲೂ ಇತ್ತು. ಮುತ್ತುರಾಜರ ವಿನಯ, ಶಿಸ್ತು, ಕಷ್ಟಪಟ್ಟು ನಿಸ್ಪೃಹವಾಗಿ ಕೆಲಸ ಮಾಡೋ ರೀತಿ ಕಂಡು ಅವರಿಗೆ ಖುಷಿಯೋ ಖುಷಿ. ಎಷ್ಟೇ ಆಗಲಿ ಸಂಬಂಧದ ಹುಡುಗ, ಮನೆ ಅಳಿಯನಾಗೋನು. ಹಾಗೆ ನೋಡಿದರೆ ನನ್ನ ಹಾಗೂ ಯಜಮಾನರ ಪೂರ್ವಿಕರ ಸ್ಥಳ ಒಂದೇ; ಕೊಳ್ಳೇಗಾಲದ ಹತ್ತಿರ ಇರೋ ಸಿಂಗನಲ್ಲೂರು.

ನಾಟಕದ ಗೀಳು ಹತ್ತಿತ್ತಲ್ಲ, ಯಜಮಾನರಿಗೆ, ಹೆಚ್ಚು ಓದೋದಾದ್ರೂ ಹೇಗೆ ಸಾಧ್ಯವಿತ್ತು? ಮೂರನೇ ಕ್ಲಾಸಿಗೋ, ನಾಲ್ಕನೇ ಕ್ಲಾಸಿಗೋ ಹೋಗಿದ್ದರು. ನಾನು ಒಂದೆರಡು ಕ್ಲಾಸು ಹೆಚ್ಚಿಗೆ